ಹೊದಿಕೆಯ ಅಂಚುಗಳನ್ನು ಹಿಡಿದು ನಾವು ಸಾವಕಾಶವಾಗಿ ಏಕಪ್ರಕಾರವಾಗಿ ಎಳೆಯತೊಡಗಿದೆವು. ನಮ್ಮ ದೃಷ್ಟಿ ಹೊದಿಕೆಯ ಕೆಳಗಿತ್ತು. ಕ್ಲೋರೋಫಾರಮ್ಮಿನ ಭೀಕರ ಘಾಟು ವಾಸನೆ ಮೂಗಿಗೆ ಅಡರುತ್ತಿತ್ತು. ನನಗೆ ಶ್ವಾಸ ತೆಗೆದುಕೊಳ್ಳಲೂ ತ್ರಾಸವಾಗತೊಡಗಿತು. ನಾನು ಮೇಲು ಮೇಲೇ ಉಸಿರಾಡತೊಡಗಿದೆ. ಹೊದಿಕೆ ಸರಿಯುತ್ತಿದ್ದಂತೆ ಹ್ಯಾರಿಯ ಎದೆ, ಪೈಜಾಮದ ಸೊಂಟದ ಭಾಗ ಯಾನೆ ಲಾಡಿ ಕಾಣತೊಡಗಿದವು. ನಂತರ ನಾವು ಅವನ ಹೊದಿಕೆಯ ಕೆಳ ಭಾಗವನ್ನು ಯಾವುದೇ ನಯ ನಾಜೂಕುಗಳಿಲ್ಲದೆ ಕಾಲುಬುಡದವರೆಗೆ ಒಮ್ಮೆಲೇ ಎಳೆದುಹಾಕಿದೆವು.

'ಮಿಸ್ಟರ್ ಪೋಪ್, ದಯವಿಟ್ಟು ಕಿಂಚಿತ್ತೂ ಅಲುಗಾಡಬೇಡಿ' ಎನ್ನುತ್ತಾ ಡಾಕ್ಟರ್ ಗಾಂಧೇರ್ ಭಾಯಿ ಹ್ಯಾರಿಯ ಹೊಟ್ಟೆ, ಮತ್ತು ಕಾಲುಗಳ ಕೆಳಗೆ ತಪಾಸಿಸುತ್ತಾ ಎಚ್ಚರಿಸಿದರು. 'ಕೊಳಕು ಮಂಡಲ ಎಲ್ಲೆಂದಲ್ಲಿ ಬಚ್ಚಿಟ್ಟಿಕೊಂಡಿರಬಹುದು. ನಾವು ಜಾಗರೂಕರಾಗೋಣ. ಅದು ನಿಮ್ಮ ಪೈಜಾಮದ ಕಾಲುಗಳಲ್ಲೇ ಅಡಗಿಕೊಂಡಿರಬಹುದು.' ಇದನ್ನು ಕೇಳುತ್ತಿದ್ದಂತೆಯೇ ಹ್ಯಾರಿ ಪೋಪ್ ತಟ್ಟನೇ ಮಂಚದ ಮೇಲೆ ಎದ್ದು ನಿಂತು ಕುಣಿದಾಡತೊಡಗಿದ. ಅವನಿಗೆ ಖಂಡಿತಾ ಕೊಳಕು ಮಂಡಲ ಕಚ್ಚಿದೆ ಎಂದು ನಮಗೆ ಖಾತರಿಯಾಯಿತು. ಡಾಕ್ಟರ್ ಗಾಬರಿಯಾದರು. ಅವರು ರಬ್ಬರ್ ಟ್ಯೂಬ್ ಮತ್ತು ಬ್ಲೇಡಿಗಾಗಿ ತಮ್ಮ ಬ್ಯಾಗಿಗೆ ಕೈ ಹಾಕಿದರು. ಅಷ್ಟರಲ್ಲಿ ಹ್ಯಾರಿಯ ಕುಣಿದಾಟ ನಿಂತಿತ್ತು. ಹ್ಯಾರಿ ಹಾಸಿಗೆಯನ್ನೇ ನೋಡುತ್ತಾ ಚೀರತೊಡಗಿದ. 'ಹಾವು ಇಲ್ಲ! ಹಾವು ಇಲ್ಲ!!' ಕೊನೆಗೂ ಹಾಸಿಗೆಯಲ್ಲಿ ಹಾವು ಇಲ್ಲ ಎಂಬ ಸತ್ಯ ನಮ್ಮೆಲ್ಲರಿಗೂ ಮನದಟ್ಟಾಯಿತು. ಆದರೂ ಏನೋ ಆತಂಕ.

'ಮಿಸ್ಟರ್ ಪೋಪ್, ಮೊದಲನೆಯದಾಗಿ ನೀವು ಕೊಳಕು ಮಂಡಲವನ್ನು ನೋಡಿದ್ದು ನಿಜವೇ ಎಂದು ಖಾತರಿ ಪಡಿಸಬಲ್ಲಿರಾ?' ಡಾಕ್ಟರ್ ಗಾಂಧೇರ್ ಭಾಯಿ ವಿಚಾರಿಸಿದರು. 'ಅದು ನಿಮ್ಮ ಭ್ರಮೆಯಲ್ಲವಷ್ಟೇ?!' ಬೇರೆ ಸಂದರ್ಭದಲ್ಲಾಗಿದ್ದರೆ ಅವರು ಇದನ್ನು ಕೇಳುತ್ತಿರಲಿಲ್ಲವೇನೋ? 'ನೀವು ಕನವರಿಸುತ್ತಿದ್ದಿಲ್ಲ ತಾನೆ?' ನನಗೆ ಅವರ ದನಿಯಲ್ಲಿ ಅಪಹಾಸ್ಯವಾಗಲಿ, ವ್ಯಂಗ್ಯವಾಗಲೀ ಕಿಂಚಿತ್ತೂ ಕಾಣಿಸಲಿಲ್ಲ. ಇದೆಲ್ಲಾ ಮುಗಿಯುವಷ್ಟರಲ್ಲಿ ನಸುಕಾಗಿತ್ತು. ಎಂತಹ ತಣ್ಣಗಿನ ಸ್ವಭಾವದ ಮನುಷ್ಯನೂ ಕೂಡ ಇಂಥ ಸಂದರ್ಭಗಳಲ್ಲಿ ಸಿಡಿಮಿಡಿಗೊಳ್ಳದಿರಲು ಸಾಧ್ಯವಿರಲಿಲ್ಲ.

ಡಾಕ್ಟರ್ ಗಾಂಧೇರ್ ಭಾಯಿಯವರು ಹೇಳಿದ್ದನ್ನು ಕೇಳುತ್ತಿದ್ದಂತೆಯೇ ಹ್ಯಾರಿ ಪೋಪ್ ತನ್ನ ಪಟಪಟೆ ಪೈಜಾಮಾದೊಂದಿಗೆ ಮಂಚದ ಮೇಲೆ ಎದ್ದು ನಿಂತ. ಅವನ ಮುಖ ಕೆಂಪು ಕೆಂಪಗಾಗಿತ್ತು. ಅವರನ್ನು ದುರುಗುಟ್ಟಿ ನೋಡುತ್ತಾ:

'ಏನಂದೆ ಹಲ್ಕಾ ನನ್ಮಗನೇ?... ನಾನು ಸುಳ್ಳುಗಾರನೇ?'

ಡಾಕ್ಟರ್ ಗಾಂಧೇರ್ ಭಾಯಿಯವರ ಮುಖ ಒಮ್ಮೆಲೇ ವಿವರ್ಣವಾಯಿತು.

ಮಂಚದ ಮೇಲಿಂದಲೇ ಹ್ಯಾರಿ ಡಾಕ್ಟರರ ಮೇಲೆ ಆಕ್ರಮಣ ಮಾಡುವವನಂತೆ ಎಗರಾಡತೊಡಗಿದ. ಅವನ ಕಣ್ಣುಗಳು ಬೆಂಕಿ ಉಗುಳುತ್ತಿದ್ದವು.

'ನೀನು ಕೊಳಕು ಚರಂಡಿಯ ಹೆಗ್ಗಣ. ನನಗೆ ಸುಳ್ಳ ಎಂದು ಹೇಳುವಷ್ಟು ಧೈರ್ಯ ನಿನಗೆ?'

'ಶಟಪ್ ಹ್ಯಾರಿ!' ನಾನು ಕೂಗಿ ಹೇಳಿದೆ.

'ಲೇಯ್ ಕೊಳಕ ಬಿಕನಾಸಿ... ನನ್ನನ್ನು ಏನೆಂದು ಕೊಂಡಿದ್ದೀಯಾ?... ಬ್ಲಡಿ ಕರಿಯ ಇಂಡಿಯನ್ ನನ್ಮಗನೇ...'

'ಹ್ಯಾರೀ!!...'